# ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ ಜಿಲ್ಲೆ, ಕೋಲಾರ

ಸಂಖ್ಯೆ ಅನು1.3202 ಸಮಾನ169 /2016-17 ದಿನಾಂಕ:30-01-2017

## ಜ್ಞಾಪನಾ

ವಿಷಯ: ಜೈನ್ ಆಂಗ್ಲ ಪ್ರೌಢ ಶಾಲೆ ಭಾರತ್ ನಗ್ ಬೆಮೆಲ್ ನಗರ ಕೆ.ಜಿ.ಎಫ್. ಪ್ರೌಢಶಾಲೆಯ 2017-18 ನೇ ಸಾಲಿನ ಮಾನ್ಯತೆ ನವೀಕರಣದ ಬಗ್ಗೆ.

ಉಲ್ಲೇಖ: ಬಿಇಒ. ಕೆಜಿಎಫ್‌ರವರ ಪತ್ರ ಸಂಖ್ಯೆ ಸಿ2 ಅನು ರಹಿತ ಪ್ರೌಢ ಶಾ ಮಾ ನವೀ 42/16-17 ದಿ:20-1-17

2) ಮಾನ್ಯ ನಿರ್ದೇಶಕರು (ಪ್ರೌಢಶಿಕ್ಷ)ಸಾಶಿಇ. ಆಯುಕ್ತರ ಕಛೇರಿ, ಬೆಂಗಳೂರುರವರ ಪತ್ರ ಸಂಖ್ಯೆ: ಸಿ8(7)ಶಾಶಿಅ.ಮಾನ್ಯತೆ.ನವೀಕರಣ.01/2016-17 ದಿ:19-08-2016.

@@@@

**ಪ್ರಸ್ತಾವನೆ**

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ, ಬಾಂಟಿಯಾ ಎಜುಕೇಷನಲ್ ಸೋಷಿಯಲ್ ವೆಲ್‌ಫೇರ್ ಸೊಸೈಟಿ ರಾಬರ್ಟಸನ್ ಪೇಟೆ ಕೆ.ಜಿ.ಎಫ್ ರವರು ಸದರಿ ಆಡಳಿತ ಮಂಡಳಿಯ ವತಿಯಿಂದ ನಡೆಯುತ್ತಿರುವ ಜೈನ್ ಆಂಗ್ಲ ಪ್ರೌಢ ಶಾಲೆ ಭಾರತ್ ನಗರ್ ಬೆಮೆಲ್ ನಗರ ಕೆ.ಜಿ.ಎಫ್. ಪ್ರೌಢಶಾಲೆಯು ಆಂಗ್ಲ ಮಾಧ್ಯಮ 8, 9 ಮತ್ತು 10ನೇ ತರಗತಿಗಳಿಗೆ 2016-17 ನೇ ಸಾಲಿನ ವರೆಗೆ ಅನುದಾನ ರಹಿತವಾಗಿ ತಾತ್ಕಾಲಿಕವಾಗಿ ಮಾನ್ಯತೆಯನ್ನು ನವೀಕರಿಸಿದ್ದು, 2017-18 ನೇ ಸಾಲಿಗೆ ಆಂಗ್ಲ ಮಾಧ್ಯಮ 8, 9 ಮತ್ತು 10ನೇ ತರಗತಿಗಳಿಗೆ ಅನುದಾನ ರಹಿತ ಮಾನ್ಯತೆ ನವೀಕರಿಸಲು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

**ಆದೇಶ :**

ಉಲ್ಲೇಖ (2)ರ ಪತ್ರದಲ್ಲಿ ದಾಖಲಾತಿ ಹಾಜರಾತಿ ಮನ್ನಾ ಮಾಡಿರುವ ಆದೇಶದಂತೆ ಬಾಂಟಿಯಾ ಎಜುಕೇಷನಲ್ ಸೋಷಿಯಲ್ ವೆಲ್‌ಫೇರ್ ಸೊಸೈಟಿ ರಾಬರ್ಟಸನ್ ಪೇಟೆ ಕೆ.ಜಿ.ಎಫ್ ರವರು ಸದರಿ ಆಡಳಿತ ಮಂಡಳಿಯ ವತಿಯಿಂದ ನಡೆಯುತ್ತಿರುವ ಜೈನ್ ಆಂಗ್ಲ ಪ್ರೌಢ ಶಾಲೆ ಭಾರತ್ ನಗರ್ ಬೆಮೆಲ್ ನಗರ ಕೆ.ಜಿ.ಎಫ್. ಈ ಶಾಲೆಗೆ ಕರ್ನಾಟಕ ಶಿಕ್ಷಣ ಅಧಿನಿಯಮ-1983 ಹಾಗೂ ಕರ್ನಾಟಕ ಶಿಕ್ಷಣ ಅಧಿನಿಯಮದ ಅಡಿಯಲ್ಲಿ ರಚಿಸಿರುವ ನಿಯಮಗಳಿಗೆ 1995ರ ಮತ್ತು ಕರ್ನಾಟಕ ಅಧಿನಿಯಮ-01 ರ ಸೆಕ್ಷನ್ ರನ್ವಯ ಈ ಶಾಲೆಗೆ ಆಂಗ್ಲ ಮಾಧ್ಯಮದಲ್ಲಿ ತಲಾ ಒಂದೊಂದು ವಿಭಾಗದಂತೆ ಒಟ್ಟು 3 ವಿಭಾಗಗಳಿಗೆ 2017-18 ನೇಸಾಲಿನಿಂದ 2021-22 ನೇ ಸಾಲಿನವರೆಗೆ ಅನುದಾನರಹಿತವಾಗಿ (Without Aid) ತಾತ್ಕಾಲಿಕವಾಗಿ ಮಾನ್ಯತೆ ನವೀಕರಿಸಿದೆ

ಸದರಿ ಶಾಲೆಯ ಪ್ರತಿ ತರಗತಿಯಲ್ಲಿ ಕನಿಷ್ಠ ದಾಖಲಾತಿ 30 ಮತ್ತು ಕನಿಷ್ಠ ಹಾಜರಾತಿ 25 ವಿದ್ಯಾರ್ಥಿಗಳ ಸಂಖ್ಯೆಯನ್ನು ಕಾಯ್ದುಕೊಳ್ಳುವುದು ಕಡ್ಡಾಯವಾಗಿರುತ್ತದೆ. ಮುಂದಿನ ಸಾಲಿನಲ್ಲಿ ಮಾನ್ಯತೆಗೆ ಪ್ರಸ್ತಾವನೆ ಸಲ್ಲಿಸುವಾಗ ಶಿಕ್ಷಕರ ಸೇವಾ ಭದ್ರತೆ ಹಾಗೂ ಸಂಬಂಧಿಸಿದ ಇನ್ನಿತರೆ ನಿಯಮಗಳನ್ನು ಪಾಲಿಸದೆ ಇದ್ದಲ್ಲಿ ನಿಮ್ಮ ಶಾಲೆಯ ಮಾನ್ಯತೆಯನ್ನು ರದ್ದುಗೊಳಿಸುವ ಅಧಿಕಾರ ಇಲಾಖೆ ಕಾಯ್ದಿರಿಸಿದೆ.

| ಕ್ರಸಂ. | ಮಾನ್ಯತೆಯ ಪ್ರಮಾಣ ಪತ್ರ | | | | | |
|---|---|---|---|---|---|---|
| 01. | ಶಾಲೆಯ ಹೆಸರು / ವಿಳಾಸ. | ಬಾಂಟಿಯಾ ಎಜುಕೇಷನಲ್ ಸೋಷಿಯಲ್ ವೆಲ್‌ಫೇರ್ ಸೊಸೈಟಿ ರಾಬರ್ಟಸನ್ ಪೇಟೆ ಕೆ.ಜಿ.ಎಫ್ ರವರು ಸದರಿ ಆಡಳಿತ ಮಂಡಳಿಯ ವತಿಯಿಂದ ನಡೆಯುತ್ತಿರುವ ಜೈನ್ ಆಂಗ್ಲ ಪ್ರೌಢ ಶಾಲೆ ಭಾರತ್ ನಗರ್ ಬೆಮೆಲ್ ನಗರ ಕೆ.ಜಿ.ಎಫ್. ವಲಯ ಕೋಲಾರ ಜಿಲ್ಲೆ | | | | |
| 02. | ಕ್ರಸಂ. | 64 /2016-17 | | | | |
| 03. | ಅನುಮತಿ ನೀಡಿರುವ ತರಗತಿಗಳು. | 8 ರಿಂದ 10ನೇ ತರಗತಿ | | | | |
| 04. | ಮಾನ್ಯತೆಯ ವಿವರ. ಅನುದಾನ ರಹಿತವಾಗಿ ನೀಡಿದ ತರಗತಿಗಳು (Without Aid) | ಮಾಧ್ಯಮ | 8ನೇ | 9ನೇ | 10ನೇ | ಒಟ್ಟು |
| | | ಆಂಗ್ಲ | 1 | 1 | 1 | 3 |

| | | |
|---|---|---|
| 05. | ಮಾನ್ಯತೆ ನೀಡಿದ ಶೈಕ್ಷಣಿಕ ವರ್ಷಗಳು. | 8 ರಿಂದ 10ನೇ ತರಗತಿಗೆ 2017-18 ರಿಂದ 2021-22 ನೇ ಸಾಲಿಗೆ ಮಾತ್ರ ಆಂಗ್ಲ ಮಾಧ್ಯಮದಲ್ಲಿ ತಲಾ ಒಂದೊಂದು ವಿಭಾಗದಂತೆ ಒಟ್ಟು 3 ವಿಭಾಗಗಳಿಗೆ ಅನುದಾನ ರಹಿತವಾಗಿ (Without Aid) ತಾತ್ಕಾಲಿಕವಾಗಿ ಮಾನ್ಯತೆ ನವೀಕರಿಸಿದೆ. |
| 06. | ಮಾನ್ಯತೆ ನೀಡಿರುವ ಬೋಧನಾ ಮಾಧ್ಯಮ. | ಆಂಗ್ಲ ಮಾಧ್ಯಮ |

ಷರತ್ತುಗಳು :

01 ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಮಾನ್ಯತೆ ನಿಯಮಗಳು-1999 ನಿಯಮ 4 ರಲ್ಲಿನ ಎಲ್ಲಾ ನಿಯಮಗಳನ್ನು ಪಾಲಿಸತಕ್ಕದ್ದು.

02 ಶಾಲೆಯ ಸ್ಥಳ ಕಟ್ಟಡ ಹಾಗೂ ಆಟದ ಮೈದಾನಗಳನ್ನು ಶಾಲೆಯ ಗೌರ್ನಿಂಗ್ ಕೌನ್ಸಿಲ್ ಅಥವಾ ಶಾಲಾ ಆಡಳಿತಮಂಡಳಿಯ ಹೆಸರಿಗೆ ನೊಂದಣಿಯಾಗಿರತಕ್ಕದ್ದು.

03 ಶಾಲೆಯ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಉತ್ತಮ ಕಟ್ಟಡ, ಸ್ಥಳಾವಕಾಶ,ನೀರು ಮತ್ತು ಶೌಚಾಲಯಗಳನ್ನು ಹೊಂದಿರತಕ್ಕದ್ದು.

04 ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯಗಳನ್ನು ಒದಗಿಸಿರತಕ್ಕದ್ದು.

05 ಶಾಲೆಯು ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಅನುಕೂಲವಾಗುವಚಿತೆ ಪ್ರಯೋಗಾಲಯ ಉಪಕರಣಗಳು, ಗ್ರಂಥಾಲಯ ಪುಸ್ತಕಗಳು, ಕ್ರೀಡೋಪಕರಣಗಳು ಹಾಗೂ ಇತರೆ ಪಾಠೋಪಕರಣಗಳನ್ನು 5ಮತ್ತು ವಿಜ್ಞಾನ,ಇತರೆ ಸಂಘಗಳನ್ನು ಹೊಂದಿರತಕ್ಕದ್ದು.

06 ಶಾಲೆಯು ದಿನಾಂಕ:02-02-2000 ರ ಸಿಬ್ಬಂದಿ ಮಾದರಿ ರಚನೆಯಂತೆ ಅಗತ್ಯ ವಿದ್ಯಾರ್ಹತೆಯುಳ್ಳ ಶಿಕ್ಷಕರನ್ನು ಹೊಂದಿರತಕ್ಕದ್ದು.

07 ಶಾಲೆಯು ಪ್ರಸ್ತುತ ಜಾರಿಯಲ್ಲಿರುವ ಶುಲ್ಕ ನಿಯಂತ್ರಣ ನಿಯಮಗಳನ್ನು ಪಾಲನೆ ಮಾಡತಕ್ಕದ್ದು.

08 ಶಾಲೆಯ ಶಿಕ್ಷಕರು ಹಾಗೂ ಇತರೆ ಸಿಬ್ಬಂದಿಗೆ ಸೇವಾ ಭದ್ರತೆಯನ್ನು ಒದಗಿಸತಕ್ಕದ್ದು ಹಾಗೂ ಬ್ಯಾಂಕ್ ಮೂಲಕ ವೇತನವನ್ನು ಪಾವತಿಸತಕ್ಕದ್ದು.

09 ಶಾಲೆಯು 1995ರ ನಿಯಮಗಳ ನಿಯಮ 18, 19, 20,ರಲ್ಲಿ ತಿಳಿಸಿರುವಚಿತೆ ಪಠ್ಯಕ್ರಮ, ಪಠ್ಯಪುಸ್ತಕ, ಬೋಧನಾ ಮಾಧ್ಯಮ, ಪರೀಕ್ಷಾ ನಿಯಮಗಳು ಹಾಗೂ ಸರ್ಕಾರ ನಿಗಧಿಪಡಿಸುವ ಶಾಲಾ ವೇಳಾಪಟ್ಟಿಯನ್ನು ಪಾಲನೆ ಮಾಡತಕ್ಕದ್ದು.

10 ಶಾಲೆಯು ಪ್ರತಿ ತರಗತಿಯಲ್ಲಿ ಕನಿಷ್ಠ ದಾಖಲಾತಿ 30 ಮತ್ತು ಕನಿಷ್ಠ ಹಾಜರಾತಿ 25 ವಿದ್ಯಾರ್ಥಿಗಳ ಸಂಖ್ಯೆಯನ್ನು ಕಾಯ್ದುಕೊಳ್ಳತಕ್ಕದ್ದು.

11. ಇಲಾಖೆಯು ವಿಧಿಸುವ ಇತರೆ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಶಾಲೆಯ ಮಾನ್ಯತೆಯನ್ನು ರದ್ದುಗೊಳಿಸುವ ಅಧಿಕಾರ ಇಲಾಖೆ ಕಾಯ್ದಿರಿಸಿದೆ.

12. ಶಾಲಾ ಸುರಕ್ಷತಾ ಕ್ರಮಗಳನ್ನು ಅನುಷ್ಠಾನಗೊಳಿಸುವುದು.

13. ಸಿ.ಸಿ.ಕ್ಯಾಮರಾಗಳನ್ನು ಕಡ್ಡಾಯವಾಗಿ ಅಳವಡಿಸುವುದು.

14. ಮುಂದಿನ ಸಾಲುಗಳಲ್ಲಿ ದಾಖಲಾತಿ/ಹಾಜರಾತಿ ಕಡಿಮೆಯಾದಲ್ಲಿ ಉಲ್ಲೇಖ (2)ರಲ್ಲಿ ತಿಳಿಸಿರುವಂತೆ ಶಾಲೆಯನ್ನು ಮುಚ್ಚಲು ಕ್ರಮ ಕೈಗೊಳ್ಳಲಾಗುತ್ತದೆ.

(ಕೆ.ಜಿ.ರಂಗಯ್ಯ)
ಉಪನಿರ್ದೇಶಕರು(ಆಡಳಿತ) ಸಾಶಿಇ 30.1.2017
ಕೋಲಾರ ಜಿಲ್ಲೆ, ಕೋಲಾರ.

ಪ್ರತಿಯನ್ನು :

01 ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇ. ಕೆ.ಜಿ.ಎಫ್, ರವರಿಗೆ ಮಾಹಿತಿಗಾಗಿ.

02 ಕಾರ್ಯದರ್ಶಿಗಳು/ಮುಖ್ಯ ಶಿಕ್ಷಕರು ಜೈನ್ ಆಂಗ್ಲ ಪ್ರೌಢ ಶಾಲೆ ಭಾರತ್ ನಗರ್ ಬೆಮೆಲ್ ನಗರ ಕೆ.ಜಿ.ಎಫ್. ವಲಯ ಕೋಲಾರ ಜಿಲ್ಲೆ ರವರಿಗೆ ಮುಂದಿನ ಕ್ರಮಕ್ಕಾಗಿ.

03 ಕಛೇರಿ ಪ್ರತಿ.

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೆ.ಜಿ.ಎಫ್ ವಲಯ, ಕೆ.ಜಿ.ಎಫ್

ಸಂಖ್ಯೆ:ಸಿ1: ಖಾ.ಶಾಲೆ ಮಾನ್ಯತೆ ನವೀ 505/2019–20 ದಿನಾಂಕ: 25/02/2020

ಫಾರಂ-2

ವಿಷಯ:ಜೈನ್ ಹಿರಿಯ ಪ್ರಾಥಮಿಕ ಶಾಲೆ, ಭಾರತ್‌ನಗರ, ಬೆಮೆಲ್‌ನಗರ, ಕೆ.ಜಿ.ಎಫ್ ಈ ಶಾಲೆಯ ಮಾನ್ಯತೆಯನ್ನು ನವೀಕರಿಸುವ ಬಗ್ಗೆ.

ಉಲ್ಲೇಖ:ಕಾರ್ಯದರ್ಶಿಗಳು, ಜೈನ್ ಹಿರಿಯ ಪ್ರಾಥಮಿಕ ಶಾಲೆ, ಭಾರತ್‌ನಗರ, ಬೆಮೆಲ್‌ನಗರ, ಕೆ.ಜಿ.ಎಫ್ ರವರ ಪತ್ರದ ಸಂಖ್ಯೆ:- ದಿನಾಂಕ:13-01-2020

2)ಈ ಕಛೇರಿಯ ಶಿಕ್ಷಣ ಸಂಯೋಜಕರ ಭೇಟಿ ವರದಿ ದಿ:10-02-2020ರ ಮೇರೆಗೆ

@@@@@

ಬಾಂಟಿಯಾ ಎಜುಕೇಷನಲ್ ಸೋಷಿಯಲ್, ಕಲ್ಚರಲ್ ಅಂಡ್ ವೆಲ್ಫೇರ್ ಟ್ರಸ್ಟ್(ರಿ) ತುಲಸಿ ನಿವಾಸ್, ಅರಿಹಂತ್ ಮಾರ್ಗ್, ಜೈನ್ ಕಾಲೋನಿ, ರಾಬರ್ಟ್‌ಸನ್‌ಪೇಟೆ, ಕೆ.ಜಿ.ಎಫ್ ರವರು ಪ್ರಾಥಮಿಕ ಶಾಲೆಯನ್ನು ಇಲಾಖಾ ಪೂರ್ವಾನುಮತಿಯೊಂದಿಗೆ ನಡೆಸಲಾಗುತ್ತಿರುತ್ತೆ. ಹಾಲಿ ಕರ್ನಾಟಕ ಶಿಕ್ಷಣ ಅಧಿನಿಯಮ 1983ರ ಸೆಕ್ಷನ್ 36 ರಿಂದ 39 (ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮಾನ್ಯತೆ) ನಿಯಮಗಳನ್ವಯ ಉಲ್ಲೇಖಿತ ಪತ್ರದಲ್ಲಿ 2020-21ನೇ ಸಾಲಿನಿಂದ ಆಂಗ್ಲ ಮಾಧ್ಯಮದಲ್ಲಿ ಮಾನ್ಯತೆ ನವೀಕರಣವನ್ನು ಕೋರಿರುತ್ತಾರೆ. ಅದರಂತೆ ಉಲ್ಲೇಖ(2'')ರ ವರದಿಯನ್ನು ಆಧರಿಸಿ ಈ ಶಾಲೆಗೆ 01 ರಿಂದ 08ನೇ ತರಗತಿಯವರೆಗೆ ತಲಾ ಒಂದೊಂದು ವಿಭಾಗದಂತೆ ಆಂಗ್ಲ ಮಾಧ್ಯಮದಲ್ಲಿ ಅನುದಾನರಹಿತ ತಾತ್ಕಾಲಿಕ ಮಾನ್ಯತೆಯನ್ನು **2020-21ನೇ ಸಾಲಿನಿಂದ 2024-25ನೇ** ಸಾಲಿನವರೆಗೆ ಈ ಕೆಳಕಂಡ ಷರತ್ತುಗಳನ್ನೊಳಪಟ್ಟು ನವೀಕರಿಸಿ ಆದೇಶಿಸಿದೆ.

ಷರತ್ತುಗಳು:

1) ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಕಡ್ಡಾಯವಾಗಿ ವೃದ್ಧಿಪಡಿಸುವುದು.
2) ಶಾಲೆಯಲ್ಲಿ ಶಿಕ್ಷಣ ಕಾಯಿದೆ 1983 ರಡಿಯಲ್ಲಿ ತಿಳಿಯಪಡಿಸಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕಡ್ಡಾಯವಾಗಿ ಒದಗಿಸತಕ್ಕದ್ದು.
3) ಶಾಲೆಯಲ್ಲಿ ಅರ್ಹ ವಿದ್ಯಾರ್ಹತೆ ಮತ್ತು ತರಬೇತಿ ಹೊಂದಿದ ಶಿಕ್ಷಕರನ್ನು ನೇಮಕ ಮಾಡುವುದು.
4) ಶಾಲೆಯಲ್ಲಿ ನಿಯಮಾನುಸಾರ ಸ್ಥಿರನಿಧಿ ಠೇವಣಿಯನ್ನು ಮುಂದುವರೆಸುವುದು.
5) ಶಿಕ್ಷಕರಿಗೆ ಕಡ್ಡಾಯವಾಗಿ ಸೇವಾ ಭದ್ರತೆ ಒದಗಿಸುವುದು.
6) ನಿಯಮಾನುಸಾರ ಅನುಮತಿ ನೀಡಿರುವ ಆಂಗ್ಲ ಮಾಧ್ಯಮದಲ್ಲಿ ಮಾತ್ರ ಬೋಧನೆ ನೀಡುವುದು.
7) ಇಲಾಖೆಯ ಪಠ್ಯಕ್ರಮವನ್ನು ಮಾತ್ರ ಪಾಲಿಸುವುದು.
8) ಶಿಕ್ಷಣ ಕಾಯಿದೆಯನ್ವಯ ನಿಗದಿಪಡಿಸಿರುವಂತೆ ಶುಲ್ಕವನ್ನು ಮಾತ್ರ ವಸೂಲು ಮಾಡುವುದು, ಹೆಚ್ಚಿಗೆ ಶುಲ್ಕಗಳು ವಸೂಲಿ ಮಾಡಿದಲ್ಲಿ ನಿಮ್ಮ ಮಾನ್ಯತೆಯನ್ನು ರದ್ದುಪಡಿಸಲಾಗುವುದು.
9) ಎಲ್ಲಾ ವಿದ್ಯಾರ್ಥಿಗಳಿಗು ದಾಖಲಾತಿಗೆ ಮುಕ್ತ ಅವಕಾಶ ನೀಡಬೇಕು.
10) ಆರ್.ಟಿ.ಇ 2009ರ ಕಾಯಿದೆ ಹಾಗೂ ನಿಯಮ 2012ರನ್ವಯ ಎಲ್ಲಾ ಅಂಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
11) ಪ್ರಾಥಮಿಕ ಶಾಲೆಯಾಗಿರುವುದರಿಂದ ಶಾಲಾ ಕಟ್ಟಡವು ಸುಸಜ್ಜಿತವೂ, ಸುರಕ್ಷಿತವಾಗಿಯೂ ಇರಬೇಕು. ಮುನ್ನೆಚ್ಚರಿಕೆಯಾಗಿ ಬೆಂಕಿ ನಿರೋದಕ ಸಲಕರಣೆಗಳನ್ನು ಸೂಕ್ತವಾಗಿ ಅಳವಡಿಸಿಕೊಳ್ಳಬೇಕು.
12) ಮಾನ್ಯ ಆಯುಕ್ತರು, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ:ಸಿ7(2)ಪ್ರಾಶಿಅ.ಹೊ.ಶಾ.73/2014-15 ದಿನಾಂಕ:14/11/2014ರಲ್ಲಿ ತಿಳಿಸಿರುವಂತೆ ಎಲ್ಲಾ ನಿಯಮಗಳನ್ನು ಚಾಚೂತಪ್ಪದೇ ಪಾಲಿಸತಕ್ಕದ್ದು.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಕೆ.ಜಿ.ಎಫ್ ವಲಯ

ರವರಿಗೆ

1) ಕಾರ್ಯದರ್ಶಿಗಳು, ಜೈನ್ ಹಿರಿಯ ಪ್ರಾಥಮಿಕ ಶಾಲೆ, ಭಾರತ್‌ನಗರ, ಬೆಮೆಲ್‌ನಗರ, ಕೆ.ಜಿ.ಎಫ್ ರವರಿಗೆ
2) ಕಛೇರಿ ಪ್ರತಿ